ಚುಟುಕು ಸುದ್ದಿ

ವಿರೋಧಿಗಳ ಮಾತಿಗೆ ಬಗ್ಗಲ್ಲ

ಕೆ.ಆರ್.ಪೇಟೆ: ಮತದಾರ ತೀರ್ಪಿಗೆ ತಲೆ ಬಾಗುತ್ತೇನೆ. ಆದರೆ, ಅದನ್ನೇ ನಮ್ಮ ದೌರ್ಬಲ್ಯ ಎಂದು ಭಾವಿಸುವ ವಿರೋಧಿಗಳ ಮಾತುಗಳಿಗೆ ನಾನು ರಾಜಕಾರಣದಲ್ಲಿರುವವರೆಗೂ ಬಗ್ಗುವುದಿಲ್ಲ ಎಂದು ಮನ್ಮುಲ್ ನಿರ್ದೇಶಕ ಡಾಲು ರವಿ ಹೇಳಿದರು.

ತಾಲ್ಲೂಕಿನ ಸಂತೆಬಾಚಹಳ್ಳಿ ಹೋಬಳಿಯ ಸಾರಂಗಿ ಸೊಸೈಟಿ ನೂತನ ನಿರ್ದೇಶಕರ ಅಭಿನಂದಿಸುವ ಸಂದರ್ಭದಲ್ಲಿ ಲಘುವಾಗಿ ಮಾತನಾಡಿರುವುದನ್ನು ಖಂಡಿಸಿದರು. ಸಾರಂಗಿ ಸೊಸೈಟಿ ಚುನಾವಣೆಯಲ್ಲಿ ಕುತಂತ್ರದಿಂದ ಸೋಲು ಅನುಭವಿಸಲಾಗಿದೆ. ಅದನ್ನೇ ದುರುಪಯೋಗಪಡಿಸಿಕೊಂಡು ಶಾಸಕರು ಮತ ನೀಡಿದ ಮತದಾರರನ್ನು ಅಪ್ರಬುದ್ಧರು ಎಂದು ಹೀಯಾಳಿಸಿದ್ದಾರೆ. ಹಿಟ್ಲರ್ ಸಂಸ್ಕೃತಿ ಮೆರೆದಿದ್ದಾರೆ. ಇಂತಹ ದಬ್ಬಾಳಿಕೆಗೆ ಹೆದರುವ ಜಾಯಮಾನ ನನ್ನದಲ್ಲ. ಇದಕ್ಕೆ ತಕ್ಕ ಉತ್ತರವನ್ನು ತಾಲ್ಲೂಕಿನ ಜನತೆ ಮುಂದಿನ ದಿನಗಳಲ್ಲಿ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಇದ್ದರೂ ಕೆ.ಆರ್.ಪೇಟೆಯಲ್ಲಿ ಮಾತ್ರ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಇದೆ. ಕಳೆದ ಪುರಸಭೆ ಚುನಾವಣೆ ಅದಕ್ಕೆ ಸಾಕ್ಷಿ. ತಾಲ್ಲೂಕಿನ ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತರು ಇದರಿಂದ ಬೇಸರಗೊಂಡಿದ್ದಾರೆ ಎಂದು ಆರೋಪಿಸಿದರು.

ಸೊಸೈಟಿ ನೂತನ ನಿರ್ದೇಶಕ ಸಾರಂಗಿ ವಿಶ್ವನಾಥ್, ಪುರುಷೋತ್ತಮ್, ದಯಾನಂದ, ರಮೇಶ್, ಮಂಜುನಾಥ್, ಕುಮಾರಸ್ವಾಮಿ, ಅಭ್ಯರ್ಥಿ ಪ್ರೇಮಮ್ಮ, ಮುದ್ದಣ್ಣ, ಅಶೋಕ್, ಶ್ಯಾರಹಳ್ಳಿ ಜಯರಾಮ್, ಸಾರಂಗಿ ದೇವರಾಜು, ಕೈಗೊನಹಳ್ಳಿ ಸರ್ವೇ ಮಂಜುನಾಥ್, ಪ್ರಸನ್ನ, ಶ್ಯಾರಹಳ್ಳಿ ಮನು, ಅಭ್ಯರ್ಥಿ ಲತಾ, ಸುರೇಶ, ಜಗದೀಶ್ ಸೇರಿದಂತೆ ಹಲವರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಕಾರಿನ ಟೈರ್ ಸಿಡಿದು ವ್ಯಕ್ತಿ ಸಾವು

ಮಂಡ್ಯ: ಕಾರಿನ ಟೈರ್ ಸಿಡಿದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವಿಗೀಡಾಗಿ, ಮಹಿಳೆ ಗಾಯಗೊಂಡಿರುವ ಘಟನೆ ಪಾಂಡವಪುರ ತಾಲೂಕು, ಚಿನಕುರಳಿ ಹುಳಿಗೆರೆ ಗ್ರಾಮದ ಬಳಿ ನಡೆದಿದೆ.

ತಾಲೂಕಿನ ದುದ್ದ ಹೋಬಳಿ, ಬೆಟ್ಟಹಳ್ಳಿ ಗ್ರಾಮದ ಚಿಕ್ಕಹಲಗಯ್ಯ(70) ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಮೃತರ ಪುತ್ರಿ ಶೋಭ ಅವರು ಗಾಯಗೊಂಡಿದ್ದು, ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹುಳಿಗೆರೆ ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಸಮೀಪ ಚಲಿಸುತ್ತಿದ್ದ ಕಾರಿನ ಟೈರ್ ಸಿಡಿದು ಪಕ್ಕದಲ್ಲೇ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಚಿಕ್ಕಹಲಗಯ್ಯ ಅವರು ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅವರ ಪುತ್ರಿ ಗಾಯಗೊಂಡಿದ್ದು, ತಕ್ಷಣ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಯಿತು.

ಮೃತರು ಪತ್ನಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂದು ಬಳಗವನ್ನು ಅಗಲಿದ್ದಾರೆ. ಬೆಟ್ಟಹಳ್ಳಿ ಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ.

ಸಂತಾಪ : ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಭಾರತೀಯ ರೆಡ್‌ಕ್ರಾಸ್ ಸಭಾಧ್ಯಕ್ಷೆ ಮೀರಾ ಶಿವಲಿಂಗಯ್ಯ, ದಸಂಸ ಮುಖಂಡ ಕೃಷ್ಣ ಜಿ.ಮಲ್ಲಿಗೆರೆ ಇತರರು ಸಂತಾಪ ಸೂಚಿಸಿದ್ದಾರೆ.

ನೀರು ಬಿಡುವವರೆಗೆ ಧರಣಿ ನಿಲ್ಲಲ್ಲ | ಹೆಚ್‌ಡಿಕೆ ವಿರುದ್ಧ ರೈತರ ಆಕ್ರೋಶ | ಸ್ಥಳಕ್ಕೆ ಅಧಿಕಾರಿಗಳ ದಂಡು; ಸಂಧಾನ ಯತ್ನ ವಿಫಲ

ನೀರಿಗಾಗಿ ರೈತರಿಂದ ಅಹೋರಾತ್ರಿ ಧರಣಿ ಆರಂಭ

ಸಂ ಕ ಸಮಾಚಾರ, ಶ್ರೀರಂಗಪಟ್ಟಣ

ಕಾಲುವೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ಕೃಷ್ಣರಾಜ ಸಾಗರ ಅಣೆಕಟ್ಟೆ ಬಳಿಯ ಕಾವೇರಿ ನೀರಾವರಿ ನಿಗಮದ ಕಚೇರಿ ಮುಂಭಾಗ ರೈತರು ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಜಿಲ್ಲೆಯಾದ್ಯಂತ ಬೆಳೆದು ನಿಂತಿರುವ ಕಬ್ಬು, ಭತ್ತ ಸೇರಿದಂತೆ ವಿವಿಧ ಬೆಳೆಗಳು ನೀರಿನ ಕೊರತೆಯಿಂದ ಒಣಗುತ್ತಿದ್ದು, ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆಯಾದರೂ ಜನಪ್ರತಿನಿಧಿಗಳು–ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ರೈತರು ದೂರಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ ಮಾತನಾಡಿ, ಅಧಿಕಾರಿಗಳು ನೀರು ಬಿಡುವುದಾಗಿ ನೀಡಿದ್ದ ಭರವಸೆ ಮೇರೆಗೆ ಕಳೆದ ವಾರ ಪ್ರತಿಭಟನೆ ಕೈಬಿಟ್ಟಿದ್ದೆವು. ಆದರೆ, ಈವರೆಗೂ ಭರವಸೆ ಈಡೇರಿಸದೇ ವಂಚಿಸಲಾಗಿದೆ. ಜಿಲ್ಲೆಯಲ್ಲಿ ಸಾವಿರಾರು ಎಕರೆ ಕಬ್ಬು ಒಣಗುತ್ತಿದ್ದು, ಅಧಿಕಾರಿಗಳು ರೈತರ ಮರಣಶಾಸನ ಬರೆಯುವ ಕೆಲಸ ಮಾಡುತ್ತಿದ್ದಾರೆ. ನೀರು ಬಿಡುವವರೆಗೆ ಧರಣಿ ನಡೆಸುವುದಾಗಿ ಎಂದು ಎಚ್ಚರಿಸಿದರು.

ಹೆಚ್‌ಡಿಕೆ ವಿರುದ್ಧ ಆಕ್ರೋಶ: ಮಂಡ್ಯ ಜನತೆಯ ಮತ ಪಡೆದು ಕೇಂದ್ರ ಸಚಿವರಾಗಿರುವ ಹೆಚ್.ಡಿ. ಕುಮಾರಸ್ವಾಮಿ ಅವರು, ಕಳೆದ ಒಂದು ತಿಂಗಳಿಂದ ರೈತರು ರಸ್ತೆ ತಡೆ, ಪ್ರತಿಭಟನೆ, ಧರಣಿ ನಡೆಸುತ್ತಿದ್ದರೂ ಒಮ್ಮೆಯೂ ಭೇಟಿ ನೀಡಿಲ್ಲ. ಅವರಿಗೆ ಬಿಡದಿಯ ಟೌನ್‌ಶಿಪ್ ವಿಚಾರದಲ್ಲಿರುವ ಆಸಕ್ತಿ ಮಂಡ್ಯದ ಬಗೆಗೆ ಏಕಿಲ್ಲ? ಜಿಲ್ಲೆಯ ರೈತರ ಸಂಕಷ್ಟ ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿಲ್ಲವೇಕೆ? ಜಿಲ್ಲೆಗೆ ಯಾಕೆ ಬರುತ್ತಿಲ್ಲ? ಎಂದು ಪ್ರಶ್ನಿಸಿದರು.

ರೈತ ಮುಖಂಡ ಕರುಣಾಕರ್ ಮಾತನಾಡಿ, ರೈತರ ಸಂಕಷ್ಟವನ್ನು ಸರ್ಕಾರದ ಗಮನಕ್ಕೆ ತರುವುದು ಅಧಿಕಾರಿಗಳ ಜವಾಬ್ದಾರಿ. ಕಬ್ಬು 12 ತಿಂಗಳ ಬೆಳೆ. ಅದಕ್ಕೆ ನೀರು ಅತ್ಯಗತ್ಯ. ಮಾಜಿ ಶಾಸಕರಾದ ದಿ. ಪುಟ್ಟಣ್ಣಯ್ಯ ಅವರ ಅವಧಿಯಲ್ಲಿ 72 ಅಡಿ ನೀರಿದ್ದರೂ ಕಾಲುವೆಗಳಿಗೆ ನೀರು ಹರಿಸಲಾಗಿತ್ತು. ಈಗ 92 ಅಡಿ ನೀರಿದ್ದರೂ ಸರ್ಕಾರ ಮೌನ ವಹಿಸಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸ್ಥಳಕ್ಕೆ ಅಧಿಕಾರಿಗಳ ದಂಡು; ಮನವೊಲಿಕೆ ವಿಫಲ: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ಧರಣಿ ಸ್ಥಳಕ್ಕೆ ಭೇಟಿ ನೀಡಿ ರೈತರೊಂದಿಗೆ ಮಾತುಕತೆ ನಡೆಸಿದರು. ಈ ವೇಳೆ ರೈತರು ತಮ್ಮ ಬೇಡಿಕೆಗಳನ್ನು ವಿವರಿಸಿ ಎಸ್‌ಪಿ ಅವರಿಗೆ ಮನವಿ ಸಲ್ಲಿಸಿದರು.

ಕಾವೇರಿ ನೀರಾವರಿ ನಿಗಮದ ಸೂಪರಿಂಟೆಂಡಿಂಗ್ ಎಂಜಿನಿಯರ್ ರಘುರಾಮ್, ರೈತರ ಮನವೊಲಿಸಲು ಯತ್ನಿಸಿದಾಗ, ರೈತರು ಮೊದಲು ನೀರು ಬಿಡಿ, ನಂತರ ಮಾತಾಡಿ ಎಂದು ಆಕ್ರೋಶ ವ್ಯಕ್ತಪಡಿಸಿ ಅಧಿಕಾರಿಗಳ ಭರವಸೆಯನ್ನು ತಿರಸ್ಕರಿಸಿದರು.

ಜಿಲ್ಲಾಧಿಕಾರಿ ಸಂಧಾನವೂ ವ್ಯರ್ಥ: ಜಿಲ್ಲಾಧಿಕಾರಿ ಕುಮಾರ್ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿ, ಎರಡು ದಿನಗಳಲ್ಲಿ ಜನ–ಜಾನುವಾರುಗಳ ಕುಡಿಯುವ ನೀರಿನ ಸಂಬಂಧ ತೀರ್ಮಾನ ಕೈಗೊಳ್ಳಲಾಗುವುದು. ರೈತರ ಪರವಾಗಿ ಸರ್ಕಾರಕ್ಕೆ ಪತ್ರ ವ್ಯವಹಾರ ನಡೆಸುತ್ತೇನೆ. ಈ ಧರಣಿಯನ್ನು ಇಲ್ಲಿಗೆ ನಿಲ್ಲಿಸಿ ಎಂದರಾದರೂ ಇದಕ್ಕೆ ಸೊಪ್ಪು ಹಾಕದ ರೈತರು ಬೆಳೆಗಳಿಗೆ ನೀರು ಬಿಡುವವರೆಗೆ ಧರಣಿ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು. ಇದರಿಂದ ಜಿಲ್ಲಾಧಿಕಾರಿಗಳ ಸಂಧಾನ ಪ್ರಯತ್ನವೂ ವಿಫಲವಾಯಿತು.

> ಕೆಆರ್‌ಎಸ್ ಜಲಾಶಯದಲ್ಲಿ 92 ಅಡಿ ನೀರಿದೆ. ಬೆಳೆಗಳಿಗೆ ಕನಿಷ್ಠ ಒಂದು ಕಟ್ಟು ನೀರು ಬಿಡಲು ಸಾಧ್ಯವಿದೆ. ಇಷ್ಟೊಂದು ಹೋರಾಟ ನಡೆದರೂ ಸರ್ಕಾರ ಮೊಂಡುತನ ಪ್ರದರ್ಶಿಸುತ್ತಿದೆ. ಕೂಡಲೇ ನೀರು ಬಿಡದಿದ್ದರೆ ಹೋರಾಟದ ಸ್ವರೂಪ ಬದಲಾಗಲಿದೆ.
>
> ▪ ಸುನಿತಾ ಪುಟ್ಟಣ್ಣಯ್ಯ, ರೈತ ನಾಯಕಿ.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗಪ್ಪಾಜಿ, ಮಂಜುನಾಥ್, ಗೋವಿಂದೇಗೌಡ, ಉಪಾಧ್ಯಕ್ಷ ರಘು, ಶಂಭೂಗೌಡ, ಅಣ್ಣಯ್ಯ, ಉಮೇಶ್, ಹರವು ಪ್ರಕಾಶ್, ಕೆನ್ನಾಳ್ ನಾಗರಾಜು, ಕಡತನಾಳು ಬಾಲಕೃಷ್ಣ, ಕಟ್ಟೇರಿ ಮಹದೇವು, ವಿಜಯಕುಮಾರ್ ಇತರರಿದ್ದರು.

ಸಂಘದ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಿನಿಂದ ಸಹಕರಿಸಿ

ಹಲಗೂರು : ಯಾವುದೇ ಸಂಘ ಸಂಸ್ಥೆಗಳು ಅಭಿವೃದ್ಧಿ ಆಗಬೇಕಾದರೆ ಸದಸ್ಯರು ಹಾಗೂ ನಿರ್ದೇಶಕರು ಒಗ್ಗಟ್ಟಿನಿಂದ ಇದ್ದರೆ ಮಾತ್ರ ಸಂಘ ಸಂಸ್ಥೆಗಳು ಬೆಳೆಯಲು ಸಹಕಾರಿಯಾಗಲಿದೆ ಎಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳಿಯ ಅಧ್ಯಕ್ಷ ಚಂದ್ರಶೇಖರ್ ಹೇಳಿದರು.

ಚಿಲ್ಲಾಪುರ ಗ್ರಾಮದ ಸಿದ್ದಪ್ಪಾಜಿ ಸಮುದಾಯ ಭವನದಲ್ಲಿ ಮಂಡ್ಯ ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ಸರ್ವ ಸದಸ್ಯರ ಸಭೆ ಮತ್ತು ಕೋ ಆಪರೇಟಿವ್ ಸೊಸೈಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಂಘವು ಮದ್ಯ ಮಾರಾಟಗಾರರಿಗೆ ಕಡಿಮೆ ಬಡ್ಡಿ ದರದಲ್ಲಿ ಹಣ ನೀಡುತ್ತಾ ಅಭಿವೃದ್ಧಿ ಹೊಂದಿದೆ. ಸದಸ್ಯರು ಸಂಘದ ಅಭಿವೃದ್ಧಿಗೆ ಒಗ್ಗಟ್ಟಿನಿಂದ ಸಹಕರಿಸಿದರೆ ಮಾತ್ರ ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯ. ಎಂದರು.

ಮಳವಳ್ಳಿ ತಾಲೂಕು ಸಂಘದ ಅಧ್ಯಕ್ಷ ಟಿ.ಗೋಪಾಲ್ ಮಾತನಾಡಿ, ಮದ್ಯದ ಅಂಗಡಿ ಪ್ರಾರಂಭಿಸುವುದು, ಮಾರಾಟ ಮಾಡುವುದು ತುಂಬಾ ಕಷ್ಟ. ಜಿಲ್ಲೆಯಲ್ಲಿ ಹಲಗೂರು ಸಂಘ ಹೆಸರು ತರುವಂತಾಗಬೇಕು ಎಂದರು.

ಮಹೇಶ್ ಮಾತನಾಡಿ, 2 ವರ್ಷದಿಂದ ಸಂಘವನ್ನು ಪ್ರಾರಂಭಿಸಬೇಕು ಎಂದುಕೊಂಡಿದ್ದು ಹಲವು ಅಡೆತಡೆಗಳಿಂದ ಈಗ ಪ್ರಾರಂಭಿಸಲಾಗಿದೆ. ಎಲ್ಲರೂ ಸಂಘದ ಅಭಿವೃದ್ಧಿಗೆ ಸಹಕರಿಸೋಣ ಎಂದರು.

ಗೋವಿಂದರಾಜು, ರಘು,ದಿನೇಶ್, ಮಧು, ಶಿವಕುಮಾರ್, ಪ್ರವೀಣ್ ಜಯರಾಮ್, ಶ್ರೀಧರ್ ರವಿ, ಕೀರ್ತಿ, ಪ್ರಜ್ವಲ್, ಕೃಷ್ಣಪ್ಪ, ನರಸಿಂಹಮೂರ್ತಿ ಇತರರಿದ್ದರು.

ಒಣಗಿದ ಕಬ್ಬಿನ ಜೊಲ್ಲೆ ಹಿಡಿದು ರೈತರಿಂದ ಅರೆಬೆತ್ತಲೆ ಪ್ರತಿಭಟನೆ

ಮಂಡ್ಯ: ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗೆ ಕೆ.ಆರ್.ಸಾಗರ ಅಣೆಕಟ್ಟೆಯಿಂದ ತಕ್ಷಣವೇ ನಾಲೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿ ಭೂಮಿತಾಯಿ ಹೋರಾಟ ಸಮಿತಿಯ ಕಾರ್ಯಕರ್ತರು ಹಾಗೂ ರೈತರು ಪಟ್ಟಣದಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಪಟ್ಟಣದ ಕುವೆಂಪು ವೃತ್ತದಿಂದ ತಾಲೂಕು ಕಚೇರಿವರೆಗೆ ಒಣಗಿದ ಕಬ್ಬಿನ ಜೊಲ್ಲೆಗಳನ್ನು ಕೈಯಲ್ಲಿ ಹಿಡಿದು ಅರೆಬೆತ್ತಲೆ ಪ್ರತಿಭಟನಾ ಮೆರವಣಿಗೆ ನಡೆಸಿದ ರೈತರು, ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನೀರಿನ ಕೊರತೆಯಿಂದ ಕಬ್ಬು ಸೇರಿದಂತೆ ವಿವಿಧ ಬೆಳೆಗಳು ಒಣಗುತ್ತಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತಕ್ಷಣವೇ ಕೆ.ಆರ್.ಸಾಗರ ಅಣೆಕಟ್ಟೆಯಿಂದ ನಾಲೆಗಳಿಗೆ ನೀರು ಹರಿಸಿ ಬೆಳೆಗಳನ್ನು ಉಳಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ರೈತರ ಹೋರಾಟ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ವಿವಿಧ ರೈತ ಸಂಘಟನೆಗಳು ನೀರು ಹರಿಸುವಂತೆ ಸರ್ಕಾರವನ್ನು ಆಗ್ರಹಿಸುತ್ತಿವೆ.

ಕೆ.ಆರ್.ಸಾಗರ ಅಣೆಕಟ್ಟೆಯಿಂದ ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಭೂಮಿತಾಯಿ ಹೋರಾಟ ಸಮಿತಿಯ ಕಾರ್ಯಕರ್ತರು ಹಾಗೂ ರೈತರು ಒಣಗಿದ ಕಬ್ಬಿನ ಜೊಲ್ಲೆಗಳೊಂದಿಗೆ ಅರೆಬೆತ್ತಲೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ವೈದ್ಯರಿಲ್ಲದ ಜಗತ್ತನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ

ಮದ್ದೂರು: ವೈದ್ಯರು ಆಧುನಿಕ ಧನ್ವಂತ್ರಿಗಳು. ವೈದ್ಯರಿಲ್ಲದ ಜಗತ್ತನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಆಸ್ಪತ್ರೆಯ ಮುಖ್ಯ ಅಧಿಕಾರಿ ಕವಿತ ಅಭಿಪ್ರಾಯಪಟ್ಟರು.

ಮದ್ದೂರಿನ ಸರ್ಕಾರಿ ಆಯುಷ್ ಆಸ್ಪತ್ರೆಯಲ್ಲಿ ಮದ್ದೂರು ಅರ್ಜುನಪುರಿ ಆಲಯನ್ಸ್ ಕ್ಲಬ್ ವತಿಯಿಂದ ಆಯೋಜಿಸಲಾಗಿದ್ದ ಬಿ.ಸಿ.ರಾಯ್ ಜನ್ಮದಿನಾಚರಣೆಯ ಅಂಗವಾಗಿ ವೈದ್ಯರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯರು ಸ್ವಂತ ಬದುಕಿಗೆ ಸಮಯವನ್ನೂ ಮೀಸಲಿಡದೇ ಸಾರ್ವಜನಿಕ ಆರೋಗ್ಯಕ್ಕಾಗಿ ಮಿಡಿಯುತ್ತಿದ್ದಾರೆ. ಇವರು ನಿಜಕ್ಕೂ ಅಭಿನಂದನಾರ್ಹರು ಎಂದರು.

ಪ್ರಾಂತೀಯ ಅಧ್ಯಕ್ಷ ಅಲೈ. ಕೆ.ಪುಟ್ಟಲಿಂಗಯ್ಯ ಮಾತನಾಡಿ, ಸದೃಢ ಆರೋಗ್ಯಕರ ಸಮಾಜ ನಿರ್ಮಿಸುವುದರಲ್ಲಿ ವೈದ್ಯರ ಸೇವೆ ಅನನ್ಯ. ಹಾಗಾಗಿ ವೈದ್ಯರನ್ನು ವೈದ್ಯೋ ನಾರಾಯಣ ಹರಿಃ ಎನ್ನುವುದು. ವೈದ್ಯರನ್ನು ಗುರುತಿಸಿ ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎರಡನೇ ಜಿಲ್ಲಾ ಉಪ ರಾಜ್ಯಪಾಲ ಅಲೈ. ಎಂ.ಎನ್.ಶಿವಣ್ಣ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಅಡ್ವೋಕೇಟ್ ಆಲಯನ್ಸ್ ಕ್ಲಬ್‌ನ ಅಲೈ.ಚಿಕ್ಕಣ್ಣಗೌಡ, ಅಲೈ.ಕೃಷ್ಣ, ಆಲಯನ್ಸ್ ಕ್ಲಬ್‌ಗಳ ಸದಸ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು.

ಗೌರವಾನ್ವಿತ 4ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮದ್ದೂರು
ಅಸಲು ದಾವಾ ನಂ. 5/2025
ವಾದಿ: ಶ್ರೀನಿವಾಸಶೆಟ್ಟಿ
– ವಿರುದ್ಧ –
ಪ್ರತಿವಾದಿ: ಎಂ.ಜೆ.ಸಹನ ಬಿನ್ ಜಗದೀಶ್ ವಯಸ್ಸು ಸುಮಾರು 26 ವರ್ಷ, ವಾಸ–ವಾರ್ಡ್ ನಂ.2, ಡಿ.ಸಿ.ಟಿ. ಮೈನ್ ರೋಡ್, ಡಿ.ಸಿ.ಟಿ. ಬಡಾವಣೆ, ಎಲ್.ಪಿ.ಸಿ. ಕಛೇರಿ ಹಿಂಭಾಗ. ಮದ್ದೂರು ಟೌನ್, ಮಂಡ್ಯ ಜಿಲ್ಲೆ.
ನ್ಯಾಯಾಲಯದ ಸಮನ್ಸ್
ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ಧ ಘನ ನ್ಯಾಯಾಲಯದಲ್ಲಿ ಹಣದ ವಸೂಲಾತಿಗಾಗಿ ದಾವೆ ಸಲ್ಲಿಸಿರುತ್ತಾರೆ.
ಸದರಿ ದಾವೆಯು ದಿನಾಂಕ: 17/08/2026ರಂದು ಸುನಾವಣೆಗಾಗಿ ಇದ್ದು, ಸದರಿ ದಿನಾಂಕದಂದು ಬೆಳಿಗ್ಗೆ 11 ಘಂಟೆಗೆ ಘನ ನ್ಯಾಯಾಲಯಕ್ಕೆ ಖುದ್ದು ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ನಿಮ್ಮ ತಕರಾರು ಏನಾದರೂ ಇದ್ದಲ್ಲಿ ಸಲ್ಲಿಸುವುದು. ಇದಕ್ಕೆ ತಪ್ಪಿದ್ದಲ್ಲಿ ಮೇಲ್ಕಂಡ ದಾವೆಯಲ್ಲಿ ನಿಮ್ಮನ್ನು ಏಕ ಪಕ್ಷೀಯ ಎಂದು ಪರಿಗಣಿಸಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.
ಈ ಪ್ರಕಟಣೆಯನ್ನು ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ದಿನಾಂಕ: 07–07–2026 ರಂದು ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಶಿರಸ್ತೇದಾರರು
ಗೌರವಾನ್ವಿತ 4ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮದ್ದೂರು.
ಅರ್ಜಿದಾರರ ಪರ ವಕೀಲರು,
ಕೆ.ಸ್ವಾಮಿ, ಮದ್ದೂರು.

ತಪ್ಪಿತಸ್ಥರ ವಿರುದ್ಧ ತನಿಖೆ ನಡೆಸಿ ಅಗತ್ಯ ಕ್ರಮ: ಗೋಪಾಲಪ್ಪ

ಮಂಡ್ಯ: 60 ಟನ್ ಹಳೆಯ ಕಬ್ಬಿಣದ ಕುರಿತು ನಿಖರ ಮಾಹಿತಿ ನೀಡುವಂತೆ ಆಗ್ರಹಿಸಿ ಭ್ರಷ್